ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Karnatak University, Dharwad.
ಪರೀಕ್ಷಾ ವಿಭಾಗ
Examination Section

ಗೌಪ್ಯ ಶಾಖೆ
Confidential Branch

ಫೋ.ನಂ. (O)0836-2215259
ಫ್ಯಾಕ್ಸ ನಂ. 0836-2741928

ನಂ. ಕವಿವಿ/ಪರೀಕ್ಷಾ(ಗೌಪ್ಯ)/2016/06

ದಿನಾಂಕ: 07-10-2016

## ಸುತ್ತೋಲೆ

**ವಿಷಯ : ಅಕ್ಟೋಬರ್/ನವೆಂಬರ್-2016 ರ ಪದವಿ ಪ್ರಾಯೋಗಿಕ ಪರೀಕ್ಷೆಗಳನ್ನು ಜರುಗಿಸುವ ಕುರಿತು.**

*-*-*

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ ತಿಳಿಸುವುದೇನೆಂದರೆ, **ಅಕ್ಟೋಬರ್/ನವೆಂಬರ್-2016** ರ ಬಿ.ಎ / ಬಿ.ಕಾಂ / ಬಿ.ಎಸಿ / ಬಿ.ಕಾಂ(ಸಿಎಸ್) / ಬಿ.ಎಸ್ಸಿ(ಸಿಎಸ್) / ಬಿ.ಎಸ್.ಡಬ್ಲ್ಯು/ಬಿ.ಬಿ.ಎ./ಬಿ.ಸಿ.ಎ./ಬಿ.ಎಫ್.ಎ./ಬಿ. ಮ್ಯೂಜಿಕ್ ಎಲ್ಲ ಸ್ನಾತಕ ಪ್ರಾಯೋಗಿಕ ಪರೀಕ್ಷೆಗಳನ್ನು ದಿನಾಂಕ **24.10.2016 ರಿಂದ 10.11.2016** ರ ಒಳಗಾಗಿ ಜರುಗಿಸಲು ಸೂಚಿಸಲಾಗಿದೆ.

1. ಕ.ವಿ.ವಿ., ವ್ಯಾಪ್ತಿಯಲ್ಲಿ ಬರುವ ಮಹಾವಿದ್ಯಾಲಯಗಳಲ್ಲಿ ಜರುಗುವ ಪ್ರಾಯೋಗಿಕ ಪರೀಕ್ಷೆಗೆ ಬಾಹ್ಯ ಪರೀಕ್ಷಕರನ್ನು ಕ.ವಿ.ವಿ.ಯಿಂದ ನೇಮಕ ಮಾಡಲಾಗುವುದು. ಸದರ ಮಾಹಿತಿಯನ್ನು ಕ.ವಿ.ವಿ ವ್ಯಾಪ್ತಿಗೆ ಸಂಬಂಧಿಸಿದ ಮಹಾವಿದ್ಯಾಲಯಗಳ ಪ್ರಾಚಾರ್ಯರ ಇ-ಮೇಲ್‌ದಲ್ಲಿ ಬಿಡಲಾಗುವುದು. ತಮ್ಮ ಮಹಾವಿದ್ಯಾಲಯದಲ್ಲಿ ಜರುಗುವ ವಿಷಯವಾರು ಪ್ರಾಯೋಗಿಕ ಪರೀಕ್ಷೆಗಳ ವೇಳಾಪಟ್ಟಿ ಸಿದ್ಧಪಡಿಸಿ, ವೇಳಾಪಟ್ಟಿಯನ್ವಯ ತಮ್ಮ ಮಹಾವಿದ್ಯಾಲಯದಲ್ಲಿ ಪರೀಕ್ಷಾ ಕಾರ್ಯಕ್ಕೆ ಹಾಜರಾಗಲು ಕ.ವಿ.ವಿ ಸೂಚಿಸಿದ ಬಾಹ್ಯ ಪರೀಕ್ಷಕರಿಗೆ ತಮ್ಮ ಮಹಾವಿದ್ಯಾಲಯದ ಮುಖಾಂತರ ಆದೇಶ ಪತ್ರ ಕಳುಹಿಸುವುದು. ಬಾಹ್ಯ ಪರೀಕ್ಷಕರಿಗೆ ತಾವು ನೀಡಿದ ಪ್ರಾಯೋಗಿಕ ಪರೀಕ್ಷೆಯ ವೇಳಾಪಟ್ಟಿ ಹಾಗೂ ಆದೇಶ ಪತ್ರದ ಸಂಪೂರ್ಣ ವಿವರವನ್ನು ಗೌಪ್ಯವಿಭಾಗದ ಇ-ಮೇಲ್ **kuconfidentialdharwad@gmail.com** ಗೆ ದಿನಾಂಕ **20.10.2016ರೊಳಗಾಗಿ ಕ.ವಿ.ವಿ., ಸೂಚಿಸಿದ ನಿಗದಿತ ನಮೂನೆಯಲ್ಲಿ ಸಲ್ಲಿಸುವುದು.**
2. ಪ್ರಾಯೋಗಿಕ ಪರೀಕ್ಷೆಗಳಿಗೆ ವಿಚಕ್ಷಕ ದಳಗಳನ್ನು ನಿಯೋಜಿಸಲಾಗುತ್ತದೆ. ಬಾಹ್ಯ / ಆಂತರಿಕ ಪರೀಕ್ಷಕರು ಹಾಗೂ ಇತರೆ ಸಿಬ್ಬಂದಿಗಳು ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗಿರುವುದರ ಹಾಗೂ ಪರೀಕ್ಷೆಗಳ ಪ್ರಕ್ರಿಯೆ ಕುರಿತು ಸದರ ವಿಚಕ್ಷಕ ದಳಗಳು ಕವಿವಿಗೆ ವರದಿ ಸಲ್ಲಿಸುತ್ತವೆ. ಪರೀಕ್ಷಾ ಪ್ರಕ್ರಿಯೆಯಲ್ಲಿ ಯಾವುದೇ ನ್ಯೂನ್ಯತೆಗಳು ಕಂಡುಬಂದಲ್ಲಿ ವಿಶ್ವವಿದ್ಯಾಲಯಗಳ ನಿಯಮಾವಳಿಗಳನ್ವಯ ಸೂಕ್ತ ಕ್ರಮ ಜರುಗಿಸಲಾಗುವುದು.
3. ಮಹಾವಿದ್ಯಾಲಯದ ಪ್ರಾಚಾರ್ಯರು ಕ.ವಿ.ವಿ ಸೂಚಿಸಿದ ಬಾಹ್ಯ ಪರೀಕ್ಷಕರನ್ನು ಹೊರತು ಪಡಿಸಿ ಇನ್ನುಳಿದ ಶಿಕ್ಷಕರನ್ನು ಆಂತರಿಕ ಪರೀಕ್ಷಕರೆಂದು ನೇಮಕ ಮಾಡಿಕೊಳ್ಳಲು ಸೂಚಿಸಲಾಗಿದೆ. ಹಾಗೂ ತಮ್ಮ ಮಹಾವಿದ್ಯಾಲಯದಿಂದ ಬೇರೆ ಮಹಾವಿದ್ಯಾಲಯಕ್ಕೆ ಬಾಹ್ಯ ಪರೀಕ್ಷಕರೆಂದು ಕ.ವಿ.ವಿ ಸೂಚಿಸಿದ ಪರೀಕ್ಷಕರಿಗೆ ಪರೀಕ್ಷಾ ಕಾರ್ಯಕ್ಕೆ ಕಡ್ಡಾಯವಾಗಿ ಹಾಜರಾಗಲು ಬಿಡುಗಡೆ ಮಾಡುವುದು.
4. ಪರೀಕ್ಷಾ ಕಾರ್ಯಕ್ಕೆ ಹಾಜರಾಗದಿರುವ ಶಿಕ್ಷಕರ ಹೆಸರುಗಳನ್ನು ಸಂಬಂಧಿಸಿದ ಪ್ರಾದೇಶಿಕ ಜಂಟೀ ನಿರ್ದೇಶಕರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗುವುದು. ಮುಂದೆ ಯಾವುದೇ ಕ್ರಮ ಕೈಕೊಂಡಲ್ಲಿ ಅದಕ್ಕೆ ಸಂಬಂಧಿಸಿದ ಶಿಕ್ಷಕರೇ ಜವಾಬ್ದಾರರಾಗುವರೆಂದು ಈ ಮೂಲಕ ತಿಳಿಸಲಾಗಿದೆ.

ಮಹಾವಿದ್ಯಾಲಯಗಳಲ್ಲಿ ಜರುಗಿದ ಪ್ರಾಯೋಗಿಕ ಪರೀಕ್ಷೆ ಅಂಕಗಳನ್ನು ಪ್ರಾಯೋಗಿಕ ಪರೀಕ್ಷೆಗಳು ಮುಕ್ತಾಯಗೊಂಡ ಮೂರು ದಿನಗಳ ಒಳಗಾಗಿ ಮಹಾವಿದ್ಯಾಲಯದ ಪ್ರಾಚಾರ್ಯರು ಸಂಬಂಧಿಸಿದ ಶಿಕ್ಷಕರಿಂದ ದ್ವಿಪ್ರತಿಯಲ್ಲಿ ಪ್ರಾಯೋಗಿಕ ಅಂಕಗಳ ಯಾದಿಯನ್ನು ಪಡೆದು ಒಂದು ಪ್ರತಿಯನ್ನು ಗಣಕಯಂತ್ರದ ಮುಖ್ಯಸ್ಥರಿಗೆ ಸಲ್ಲಿಸುವುದು. ಇನ್ನೊಂದು ಪ್ರತಿಯನ್ನು ಸಂಬಂಧಿಸಿದ ವಿಭಾಗದ ಅಧೀಕ್ಷಕರಿಗೆ ಕಳುಹಿಸಲು ತಿಳಿಸಲಾಗಿದೆ.

6. ಕೆಲವು ಮಹಾವಿದ್ಯಾಲಯಗಳಲ್ಲಿ ಕ.ವಿ.ವಿ.ಯಿಂದ ಪಡೆದ ಮುಂಗಡ ಹಣದ ಹೊಂದಾಣಿಕೆ ಮಾಡದೇ ಇರುವುದರಿಂದ ಲೆಕ್ಕ ಪರಿಶೋಧಕರು ಆಕ್ಷೇಪಣೆ ವ್ಯಕ್ತಪಡಿಸಿರುವುದರಿಂದ ಪರೀಕ್ಷಾ ಕಾರ್ಯ ನಿರ್ವಹಿಸಿದ ಶಿಕ್ಷಕರಿಗೆ ಕಡ್ಡಾಯವಾಗಿ ಆರ್.ಟಿ.ಜಿ.ಎಸ್. ಮುಖಾಂತರ ಅವರ ಖಾತೆಗೆ ಹಣ ಪಾವತಿಸುವ ನಿಯಮ ಜಾರಿಗೆ ತರಲಾಗಿರುವುದರಿಂದ ಮಹಾವಿದ್ಯಾಲಯಗಳಿಗೆ ಮುಂಗಡ ಹಣವನ್ನು ಮಂಜೂರು ಮಾಡಲಾಗುವುದಿಲ್ಲ.

ಮು.ಪಿ.ನೋ

7. ಪ್ರಾಯೋಗಿಕ ಪರೀಕ್ಷಾ ಕಾರ್ಯ ನಿರ್ವಹಿಸಿದ ಶಿಕ್ಷಕೇತರ ಸಿಬ್ಬಂದಿಯ ಒಟ್ಟು ಬಿಲ್ಲುಗಳನ್ನು ಕ.ವಿ.ವಿ. ಕೈಪಿಡಿಯಲ್ಲಿ ತೋರಿಸಿದ ದರಪಟ್ಟಿಯಂತೆ ಸಿದ್ಧಪಡಿಸಿ ಪ್ರಾಚಾರ್ಯರ ಹೆಸರಿನಲ್ಲಿ ಚೆಕ್ ಸಂದಾಯವಾಗುವಂತೆ ಕಳುಹಿಸಲು ಸೂಚಿಸಲಾಗಿದೆ.

8. ಪ್ರಾಯೋಗಿಕ ಪರೀಕ್ಷಾ ಕಾರ್ಯಕ್ಕೆ ಕ.ವಿ.ವಿ ಸೂಚಿಸಿದ ಬಾಹ್ಯ ಪರೀಕ್ಷಕರಿಗೆ ಹಾಗೂ ಆಯಾ ಮಹಾವಿದ್ಯಾಲಯಗಳ ಆಂತರಿಕ ಪರೀಕ್ಷಕರಿಗೆ ಪರೀಕ್ಷಾ ಕಾರ್ಯ ನಿರ್ವಹಣೆಯ ಮೊತ್ತವನ್ನು ಪಾವತಿಸುವ ವಿಷಯವಾಗಿ ಮಹಾವಿದ್ಯಾಲಯದ ಪ್ರಾಚಾರ್ಯರು ನೀಡಿದ ನೇಮಕಾತಿ ಆದೇಶ ಪ್ರತಿ ಹಾಗೂ ಮಹಾವಿದ್ಯಾಲಯಗಳಲ್ಲಿ ಕಾರ್ಯ ನಿರ್ವಹಿಸಿದ ಹಾಜರಾತಿ ಪ್ರಮಾಣಪತ್ರದ ಮೂಲ ಪ್ರತಿಯನ್ನು ಮತ್ತು ಆರ್.ಟಿ.ಜಿ.ಎಸ್.ಗೆ ಸಂಬಂಧಿಸಿದ ಮಾಹಿತಿಯನ್ನು (ಬಿಲ್ಲುಗಳಲ್ಲಿ ತೋರಿಸಿದಂತೆ), ಪರೀಕ್ಷಾ ವೇಳಾ ಪಟ್ಟಿಯನ್ನು ಹಾಗೂ ಯುಜಿಸಿ/ನಾನ್ ಯುಜಿಸಿ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸುವುದು.

9. ಪ್ರಾಯೋಗಿಕ ಪರೀಕ್ಷೆಗಳು ಮುಕ್ತಾಯವಾದ ತಕ್ಷಣವೇ ಸಂಭಾವನೆಯ ಬಿಲ್ಲುಗಳನ್ನು ಕ.ವಿ.ವಿಗೆ ಸಲ್ಲಿಸಲು ಸೂಚಿಸಲಾಗಿದೆ.

10. ಪ್ರಾಯೋಗಿಕ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಪರಿಣಾಮ ಪ್ರಕಟಗೊಳ್ಳುವವರೆಗೆ ಮಹಾವಿದ್ಯಾಲಯಗಳಲ್ಲಿಯೇ ಇಟ್ಟುಕೊಳ್ಳುವುದು ಹಾಗೂ ಕನಿಷ್ಠ 01 ವರ್ಷದವರೆಗೆ ಕಾಯ್ದಿರಿಸುವುದು.

11. ಪ್ರಾಯೋಗಿಕ ಪರೀಕ್ಷೆಗಳಲ್ಲಿ ಸ್ಟೋರ್ ಕೀಪರ್/ಡಾರ್ಕ ರೂಮ್ ಅಸಿಸ್ಟಂಟ/ಕಾರಪೇಂಟರ್/ಗ್ಯಾಸ್ ಮೆಕ್ಯಾನಿಕ ಹುದ್ದೆಗಳನ್ನು ರದ್ದುಪಡಿಸಲಾಗಿದೆ.

12. ಕೇವಲ ಏಳು ಮಹಾವಿದ್ಯಾಲಯಗಳಲ್ಲಿ ಮಾತ್ರ ಅಪರಾಧಶಾಸ್ತ್ರ ಮತ್ತು ವಿಧಿವಿಜ್ಞಾನ ವಿಷಯದ ಪ್ರಾಯೋಗಿಕ ಪರೀಕ್ಷೆಗಳು ಜರುಗುವುದರಿಂದ ಸದರ ಮಹಾವಿದ್ಯಾಲಯಗಳಿಗೆ ವೇಳಾ ಪಟ್ಟಿ ಮತ್ತು ಬಾಹ್ಯ ಪರೀಕ್ಷಕರನ್ನು ಕವಿವಿಯಿಂದ ನಿಯೋಜಿಸಿ ಆದೇಶಗಳನ್ನು ಹೊರಡಿಸಲಾಗುವುದು.

13. ಬೆಳಗಾವಿ/ಬಿಜಾಪೂರ/ಬಾಗಲಕೋಟ ಜಿಲ್ಲೆಗಳಲ್ಲಿ ಕ.ವಿ.ವಿ.ಗೆ ಸಂಬಂಧಿಸಿದಂತೆ 1, 3 ಮತ್ತು 5 ನೇ ಸೆಮಿಸ್ಟರ್‌ಗಳ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದಂತಹ ಅನಿಯಮಿತ ವಿದ್ಯಾರ್ಥಿಗಳು ಪ್ರಾಯೋಗಿಕ ಪರೀಕ್ಷೆಯ ಓ.ಎಮ್.ಆರ್. ಫಾರ್ಮ ತುಂಬಿದಲ್ಲಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳನ್ನು ಸಂಬಂಧಿಸಿದ ಮಹಾವಿದ್ಯಾಲಯಗಳಲ್ಲಿ ಕ.ವಿ.ವಿ. ನಿಗದಿಪಡಿಸಿದ ದಿನಾಂಕದೊಳಗಾಗಿ ವೇಳಾಪಟ್ಟಿಯನ್ನು ಸಿದ್ಧಪಡಿಸಿಕೊಂಡು ಆಯಾ ಮಹಾವಿದ್ಯಾಲಯಕ್ಕೆ ಹತ್ತಿರವಿರುವ ವಿಷಯಕ್ಕೆ ಸಂಬಂಧಿಸಿದ ಬೇರೆ ಮಹಾವಿದ್ಯಾಲಯದ ಶಿಕ್ಷಕರನ್ನು ಬಾಹ್ಯ ಪರೀಕ್ಷಕರೆಂದು ನೇಮಿಸಿಕೊಂಡು ಪರೀಕ್ಷೆಗಳನ್ನು ಜರುಗಿಸಿ ಅಂಕಗಳ ಯಾದಿಯನ್ನು ಸಿಸ್ಟಮ್ ಅನಾಲಿಸ್ಟ್, ಪರೀಕ್ಷಾ ಗಣಕಯಂತ್ರ ಕೇಂದ್ರ, ಕ.ವಿ.ವಿ., ಧಾರವಾಡ ಇವರಿಗೆ ಕಳುಹಿಸಲು ಸೂಚಿಸಲಾಗಿದೆ.

14. ಅಕ್ಟೋಬರ್/ನವೆಂಬರ್-2016 ರಲ್ಲಿ ಜರುಗುವ ಪ್ರಾಯೋಗಿಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪ್ರಶ್ನೆ ಪತ್ರಿಕೆಗಳನ್ನು ಆಂತರಿಕ ಮತ್ತು ಬಾಹ್ಯ ಪರೀಕ್ಷಕರು ಸೇರಿ ಸಿದ್ಧಪಡಿಸಿ ಪರೀಕ್ಷೆಗಳನ್ನು ಜರುಗಿಸಲು ಸೂಚಿಸಲಾಗಿದೆ ಹಾಗೂ 10 ರಿಂದ 15 ವಿದ್ಯಾರ್ಥಿಗಳಿಗೆ ಒಂದು ಬ್ಯಾಚ್‌ನಂತೆ ಪರಿಗಣಿಸಿ ಪರೀಕ್ಷೆಗಳನ್ನು ಜರುಗಿಸಲು ತಿಳಿಸಲಾಗಿದೆ. ಮುಂದುವರೆದು ಸ್ನಾತಕ ಕೋರ್ಸಗಳ 2016-17ನೇ ಸಾಲಿನ ಪ್ರವೇಶ ನಿಯಮಾವಳಿಗಳ ಪ್ರಕಾರ ವಿದ್ಯಾರ್ಥಿಗಳ ಕನಿಷ್ಠ ಹಾಜರಾತಿ 75% ಇರುವುದು ಕಡ್ಡಾಯವಾಗಿರುತ್ತದೆ. ಇದರ ಮೇಲ್ವಿಚಾರಣೆಯನ್ನು ಸಂಬಂಧಪಟ್ಟ ಶಿಕ್ಷಕರು, ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಚಾರ್ಯರಿಗೆ ಜವಾಬ್ದಾರಿಯನ್ನು ವಹಿಸಿಕೊಡಲಾಗಿದೆ.

15. ಬಿಕಾಂ(ಕಂಪ್ಯೂಟರ್)/ಬಿಬಿಎ/ಬಿಸಿಎ/ಬಿಎಸ್ಸಿ(ಸಿಎಸ್)/ಬಿಬಿಎ(ಎಚ್.&ಟಿ) ಕೋರ್ಸಗಳ ಪ್ರಾಯೋಗಿಕ ಪರೀಕ್ಷೆಗಳಿಗೆ ಪರ್‌ಕ್ಯಾಪಿಟಾ ಮೊತ್ತವನ್ನು ನೀಡಲಾಗುವುದಿಲ್ಲ. ಈ ವಿಷಯಗಳನ್ನು ಹೊರತುಪಡಿಸಿ ಉಳಿದ ವಿಷಯಗಳಿಗೆ ಕವಿವಿಯ ಕೈಪಿಡಿಯಲ್ಲಿ ತೋರಿಸಲಾದ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪ್ರಾಚಾರ್ಯರು ಹಣವನ್ನು ಪಡೆದುಕೊಳ್ಳಲು ತಿಳಿಸಲಾಗಿದೆ.

16. ವಿದ್ಯುತ್‌ನಿಂದ ಅವಲಂಬಿತ ಪ್ರಯೋಗಗಳಿಗೆ ಪರ್ಯಾಯ ವಿದ್ಯುತ್ ವ್ಯವಸ್ಥೆ ಮಾಡಿಕೊಳ್ಳಲು ಸೂಚಿಸಲಾಗಿದೆ.

ಮೇಲ್ಕಾಣಿಸಿದ ವಿಷಯಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಪ್ರಾಯೋಗಿಕ ಪರೀಕ್ಷೆಗಳನ್ನು ಯಾವುದೇ ತೊಂದರೆಯಾಗದಂತೆ ಜರುಗಿಸಲು ಸೂಚಿಸಲಾಗಿದೆ ಹಾಗೂ ಹೆಚ್ಚಿನ ಮಾಹಿತಿಯನ್ನು ಕ.ವಿ.ವಿ. ಅಂತರ್ಜಾಲ ತಾಣ **www.kud.ac.in** ದಿಂದ ಪಡೆದುಕೊಳ್ಳಬಹುದು.

ಕುಲಸಚಿವರು (ಮೌಲ್ಯಮಾಪನ)

ಗೆ,

ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳು.

**ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ :**

1. ಹಣಕಾಸು ಅಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ಉಪಕುಲಸಚಿವರು / ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕನಾಟಕ ವಿಶ್ವವಿದ್ಯಾಲಯ, ಧಾರವಾಡ.
3. ಸಿಸ್ಟಮ್ ಅನಾಲಿಸ್ಟ, ಗಣಕಯಂತ್ರ ಕೇಂದ್ರ, ಪರೀಕ್ಷಾ ವಿಭಾಗ, ಕ.ವಿ.ವಿ.ಧಾರವಾಡ.